**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ.ಪಿ. ಸುಜಾ ಕುಶಾಲಪ್ಪ ಇವರು ನಿಯಮ 72 ರಡಿ ನೀಡಿರುವ ಸೂಚನೆಗೆ ಮಾಹಿತಿ**

ಕೊಡಗು ಜಿಲ್ಲೆಯಲ್ಲಿರುವ ಬಾಣೆ ಜಮೀನುಗಳಿಗೆ ಕಂದಾಯ ನಿಗಧಿ ಪಡಿಸಲು ಸುಮಾರು 900 ಕ್ಕಿಂತ ಹೆಚ್ಚು ಪ್ರಸ್ತಾವನೆಗಳು ಹಲವಾರು ವರ್ಷಗಳಿಂದ ಬಾಕಿ ಇದ್ದು, ರೈತರಿಗೆ ತೀರ್ವ ತರದಲ್ಲಿ ಸಮಸ್ಯೆ ಉಂಟಾಗುತ್ತಿದೆ. ಅದೇ ರೀತಿ ಪೌತಿ ಖಾತೆ ವಿಭಾಗದಲ್ಲಿಯೂ ಕೂಡ 1000 ಕ್ಕಿಂತ ಹೆಚ್ಚು ಕಡತಗಳು ವಿಲೇವಾರಿಯಾಗದೆ ಬಾಕಿ ಇರುತ್ತವೆ. ಮಾತ್ರವಲ್ಲದೇ, ಪಹಣಿಯಲ್ಲಿನ ದಾಖಲೆಗಳಲ್ಲಿ ಪಿ1, ಪಿ2 ಸರ್ವೆಗೆ ಸಂಬಂಧಿಸಿದ 60,000 ಕ್ಕೂ ಹೆಚ್ಚು ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಉಳಿದಿರುತ್ತವೆ. ಕೊಡಗು ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ತಮ್ಮ ತಮ್ಮ ಕಾರ್ಯನಿರ್ವಹಣೆಯಲ್ಲಿ ಸಂಪೂರ್ಣವಾಗಿ ವಿಫಲರಾಗಿ ಸ್ತಬ್ಧರಾಗಿರುತ್ತಾರೆ. ಆದ್ದರಿಂದ ಅಧಿಕಾರಿಗಳ ನಿರ್ಲಕ್ಷ್ಯದಿಂದ ಉಂಟಾಗುತ್ತಿರುವ ಈ ಸಮಸ್ಯೆಗಳನ್ನು ಬಗೆಹರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಹಾಗೂ ಬೇಜವಬ್ದಾರಿಯುತ ಅಧಿಕಾರಿಗಳನ್ನು ಅಮಾನತ್ತುಗೊಳಿಸುವಂತೆ ಒತ್ತಾಯಿಸಲು ಮಾನ್ಯ ಕಂದಾಯ ಸಚಿವರನ್ನು ಕೋರಿರುವ ಬಗ್ಗೆ.

* * *

ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಬಾಣೆ ಜಮೀನುಗಳಿಗೆ ಕಂದಾಯ ನಿಗಧಿಪಡಿಸುವ ಸಂಬಂಧ ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 53 ಶಾಸನ 2011, ದಿನಾಂಕ:01.02.2013 ರಂತೆ ಜಮ್ಮ ಮತ್ತು ಇತರೆ ಬಾಣೆ ಜಮೀನುಗಳಿಗೆ ಕಂದಾಯ ನಿಗಧಿಪಡಿಸುವ ಸಂಬಂಧ ಕ್ರಮವಹಿಸಲಾಗುತ್ತಿದೆ.

ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಕಂದಾಯ ನಿಗಧಿಗಾಗಿ ಬಾಕಿ ಇರುವ ಬಾಣೆ ಜಮೀನುಗಳಿಗೆ ಸಂಬಂಧಿಸಿದಂತೆ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಗಳ ವ್ಯಾಪ್ತಿಯಲ್ಲಿ ಪ್ರಸ್ತುತ ಅಳತೆಗಾಗಿ 501 ಕಡತಗಳು ಮಾತ್ರ ನವೆಂಬರ್ 2023 ರ ಅಂತ್ಯಕ್ಕೆ ಬಾಕಿ ಉಳಿದು ಕೊಂಡಿರುತ್ತವೆ. ಅಳತೆಗಾಗಿ ಬಾಕಿ ಇರುವ 501 ಕಡತಗಳನ್ನು ಪ್ರಸ್ತುತ ಲಭ್ಯವಿರುವ 18 ಭೂಮಾಪಕರುಗಳ ಸೇವೆಯನ್ನು ಬಳಸಿಕೊಂಡು ಕೆರೆ ಅಳತೆ, ನಮೂನೆ 57 ಹಾಗೂ ಇತರೇ ಭೂಮಾಪನಕ್ಕೆ ಸಂಬಂಧಿಸಿದ ಅಳತೆ ಕಾರ್ಯಗಳ ಜೊತೆಗೆ ತಿಂಗಳಿಗೆ 30 ಕಡತಗಳ ಗುರಿ ನಿಗಧಿಪಡಿಸಿಕೊಂಡು 03 ತಿಂಗಳೊಳಗಾಗಿ ಅಳತೆ ಕೆಲಸ ಪೂರೈಸಲಾಗುವುದೆಂದು ಭೂದಾಖಲೆಗಳ ಉಪ ನಿರ್ದೇಶಕರು, ಕೊಡಗು ಜಿಲ್ಲೆ ಇವರು ವರದಿ ಸಲ್ಲಿಸಿರುತ್ತಾರೆ.

ಪೌತಿ ಖಾತೆಗೆ ಸಂಬಂಧಿಸಿದಂತೆ ಭೂಮಿ ಕೇಂದ್ರದಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡಲಾಗುತ್ತಿದೆ ಹಾಗೂ ಆಗಿಂದಾಗ್ಗೆ ಪೌತಿಖಾತೆ ಆಂದೋಲನವನ್ನು ನಡೆಸಿ ರೈತರಿಂದ ಅರ್ಜಿ ಸ್ವೀಕರಿಸಿ ಸಕಾಲದಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ನೈಜ ಖಾತೆದಾರರು ಮೃತರಾದ ಸಂದರ್ಭದಲ್ಲಿ ನಿಯಮಾನುಸಾರ ಸಕಾಲದಲ್ಲಿ ಕಾನೂನುಬದ್ಧ ವಾರಸುದಾರರಿಗೆ ನಿಗಧಿತ ಅವಧಿಯೊಳಗೆ ಪೌತಿಖಾತೆ ಬದಲಾವಣೆ ಆಗುತಿದ್ದು, ವಿಳಂಬವುಂಟಾಗಿರುವುದಿಲ್ಲ.

ಭೂಮಿ ತಂತ್ರಾಂಶದ ಮಾಹಿತಿಯಂತೆ ಕೊಡಗು ಜಿಲ್ಲೆಯಲ್ಲಿ ಒಟ್ಟು 61027 ಪೈಕಿ ಪಹಣಿ ದಾಖಲೆಗಳು ಇದ್ದು, ಇವುಗಳಲ್ಲಿ ಭೂಮಂಜೂರಾತಿಯಾಗಿರುವ ಪ್ರಕರಣಗಳು ಮತ್ತು ಕಂದಾಯಕ್ಕೆ ಬಾರದ ಬಾಣೆ ಜಮೀನುಗಳು ಸಹ ಒಳಗೊಂಡಿರುತ್ತದೆ. ಭೂಮಂಜೂರಾತಿ ಪ್ರಕರಣಗಳಲ್ಲಿ ಸರ್ಕಾರದ ನಿರ್ದೇಶನದಂತೆ ನಮೂನೆ 1-5 ರಲ್ಲಿ ಭೂಮಂಜೂರಾತಿಯಾದ ಮಾಹಿತಿಯನ್ನು ತಯಾರಿಸಿದ ನಂತರ ಪೋಡಿ ಕ್ರಮ ಜರುಗಿಸಬೇಕಾಗಿರುತ್ತದೆ. ಜಿಲ್ಲೆಯಲ್ಲಿ ಭೂಮಾಪಕರ ಕೊರತೆಯಿದ್ದು ಲಭ್ಯವಿರುವ ಭೂಮಾಪಕರಿಗೆ ಮಾಸಿಕ ಗುರಿ ನಿಗಧಿಪಡಿಸಿ ಹಂತಹಂತವಾಗಿ ವಿಲೇವಾರಿ ಮಾಡಲಾಗುತ್ತಿದೆ.

ಮೇಲ್ಕಂಡ ಪ್ರಕ್ರಿಯೆಗಳು ನಿರಂತರ ಪ್ರಕ್ರಿಯೆಗಳಾಗಿದ್ದು ವಿಳಂಬಕ್ಕೆ ಆಸ್ಪದ ನೀಡದೇ ವಿಲೇವಾರಿಗೆ ಕ್ರಮವಹಿಸಲಾಗುತ್ತಿದೆ.

ಕಡತ ಸಂಖ್ಯೆ:ಕಂಇ 35 ಎಲ್‌ಜಿಒ 2023

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು